now and it is likely that that investigation will be completed as early as possible.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಕಂಬದ ಕಡ ಬದಲು ಯಾವ ಯೋಜನೆಯ alternative project ಸೂಚನೆ ಮಾಡಿದ್ದಾರೆ ?

Mr. SPEAKER.—All these supplementaries have been put on the last occasion and answered.

Sri VEERENDRA PATIL.—According to the decision taken in May 1961, the alternative proposal for the Kambadakoda Project is to have an anecut upstream to irrigate 2,500 acres in Coorg and a reservoir at Kattepur on Cauvery having two to four times the capacity of Kambadakada Project for irrigating the area under the existing channel.

Sri C. J. MUCKANNAPPA.—The Government have taken a decision in regard to the Kambadakada Project. Do they want to drop this project ?

Sri VEERENDRA PATIL.—There is no question of dropping the project altogether ; it is a question of dropping the project as it was included in the Third Five-Year Plan.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಯೋಜನೆಯ ಪರಿಶೀಲನೆ ಯಾಗಿದೆಯೇ ?

Sri VEERENDRA PATIL.—As I said, investigation is going on now.

Sri G. V. GOWDA.—Has the Central Water and Power Commission held that the estimates prepared originally and the projects investigated originally are not feasible ?

Sri VEERENDRA PATIL.—When we made the detailed investigation and submitted the plans and estimates to the Central Water and Power Commission, according to the procedure they have to give technical clearance to these projects. Before giving that, they have asked the State Governments to further investigate and suggest alternative proposals which are now under investigation.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಾವು ಅಧಿಕಾರ ದಲ್ಲಿರುವ ಕಾಲದಲ್ಲಿಯೇ ಈ ಇನ್‌ವೆಸ್ಟಿಗೇಷನ್ ಪೂರ್ತಿ ಮಾಡಲಾಗುವುದೇ ?

(No reply).

Sri H. R. KESHAVA MURTHY.—The intention of the Government was not to supply water to the dry areas under the original Harangi Project. Is that aim fulfilled by changing the proposal ?

Sri VEERENDRA PATIL.—It is too early to answer that question because the whole proposal is under investigation. I will be in a position to answer after I get the investigation report from our officers.

Sri S. SHIVAPPA.—When are you going to get the final report ?

Sri VEERENDRA PATIL.—Government is also equally anxious. I will see that investigation is completed as early as possible.

Protests against the Construction of Hallimala Project for Supply of Water to Bangalore.

**Q.*—37. Sri T. MADAIAH GOWDA (Ramanagaram).—

Will the Government be pleased to state :—

(*a*) whether it has come to their notice that protests have been received from several quarters against the construction of Hallimala Project for the supply of water to Bangalore, but suggested bringing water to the City from the river Cauvery ;

(*b*) the number of people who will be displaced and the extent of land that will be submerged if the Hallimala Project is taken up ;

(*c*) the estimated loss of expropriated people ;

(*d*) how long the water from such project can serve Bangalore with sufficient water ?

A.—Sri VEERENDRA PATIL (Ministe for Public Works and Transport).—

(*a*) Yes.

(*b*) About 7500 people will be displaced and about 2745 acres will be submerged.

(*c*) The loss due to submersion is estimated at Rs. 30.77 lakhs.

(*d*) About ten years.

ಶ್ರೀ ಟಿ. ಮಾದಯ್ಯಗೌಡ.—ಸ್ವಾಮಿ, ಈ ಹಳ್ಳಿ ಮಾಲಾ ಯೋಜನೆಗೆ ಅನೇಕ ಕಡೆಯಿಂದ ಪ್ರತಿಭಟನೆ ಬಂದಿದೆ ಎಂದು ಸರಕಾರದವರು ಅಪ್ಪಣೆ ಕೊಡಿಸಿ ದ್ದಾರೆ. ಹಾಗಾದರೆ ಈ ಯೋಜನೆಯಿಂದ ಯಾವ ಪ್ರಯೋಜನವಾಗಲಾರದು ಎಂದು ಅಭಿಪ್ರಾಯ ಪಟ್ಟಿ ದ್ದಾರೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೆ ?

*ಶ್ರೀ ವೀರೇಂದ್ರ ಪಾಟೀಲ್.—ಹಳ್ಳಿಮಾಲಾ ಯೋಜನೆ ತೆಗದುಕೊಳ್ಳುವುದು ಬೇಡ ಕಾವೇರಿ ಯೋಜನೆಯನ್ನು ತೆಗೆದುಕೊಳ್ಳ ಬೇಕೆಂದು ನರಕಾಕ್ಕೆ ಜನ ಹೇಳುತ್ತಿದ್ದಾರೆ.

ಶ್ರೀ ಟಿ. ಮಾದಯ್ಯಗೌಡ.— ಈ ಯೋಜನೆಯಿಂದ ಯಾವ ಪ್ರಯೋಜನವಾಗುವುದಿಲ್ಲ. ಕಷ್ಟ ನಷ್ಟ ಗಳುಂಟಾಗುತ್ತವೆಂಬ ತಜ್ಞರ ಅಭಿಪ್ರಾಯ ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ವೀರೇಂದ್ರ ಪಾಟೀಲ್.—ಜನ ಅಭಿಪ್ರಾಯ ಕೊಡುವುದು ಬೇರೆ. ತಜ್ಞರು ಕೂಲಂಕಷವಾಗಿ ಪರಿ ಶೀಲನೆಮಾಡಿ ರಿಪೋರ್ಟ್ ಕೊಡುವುದು ಬೇರೆ. ಕಾವೇರಿ ನೀರೇಬೇಕು ಎಂದು ಕಾರ್ಪೊರೇಷನ್ ಮುಖಾಂತರ ಜನಾಭಿಪ್ರಾಯ ವ್ಯಕ್ತವಾಗಿದೆ. ಜನರ ಅಭಿಪ್ರಾಯ layman's opinion ಆಗುತ್ತದೆ. ಆದ್ದರಿಂದ ಒಂದು ಆಡ್ ಹಾಕ್ ಕಮಿಟಿ ನೇಮಕ ಮಾಡಿದೆ. ಅದರಲ್ಲಿ ತಜ್ಞರು ಸಂಬಂಧಪಟ್ಟ ಅಧಿಕಾರಿಗಳು ಪರಿ ಶೀಲನೆಮಾಡಿ ವರದಿ ಮಾಡಿದ್ದಾರೆ. ಹಳ್ಳಿ ಮಾಲಾ ಯೋಜನೆ ಸರಿಯಾಗಿದೆ. ಅದನ್ನು ತೆಗೆದುಕೊಳ್ಳ ಬಹುದು ಎಂದು ಹೇಳಿದ್ದಾರೆ. ಈಗ ಈ ಮೂರು ಯೋಜನೆಗಳನ್ನು ಕೂಲಂಕಷವಾಗಿ ಪರಿಶೀಲನೆ ಮಾಡು ವುದಕ್ಕೆ ಖರ್ಚು ಮಾಡಲು ನಾಲ್ಕು ಲಕ್ಷ ರೂಪಾಯಿ ಹಣ ಒದಗಿಸಿದ್ದೇವೆ.

ಶ್ರೀ ಟಿ. ಮಾದಯ್ಯಗೌಡ.—ಹಳ್ಳಿಮಾಲಾ ಯೋಜನೆಯ ಜೊತೆಗೆ ಬೇರೆ ಇನ್ನೊಂದು ಯೋಜನೆಯನ್ನು ಸೇರಿಸಿಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈಗ ನಮ್ಮ ಮುಂದೆ ಮೂರು ಯೋಜನೆಗಳಿವೆ. ಈ ಮೂರು ಯೋಜನೆಗಳ detailed investigation ಮಾಡಿ ವರದಿ ಮಾಡಬೇಕೆಂದು ತಿಳಿಸಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹತ್ತು ವರ್ಷಗಳ ವರೆಗೆ ನೀರು ಸಾಕಾಗುತ್ತದೆ ಎಂದು ಹೇಳುವುದಕ್ಕೆ ಇರತಕ್ಕಂಥ ಅಂಕ ಅಂಶ ಸಾಹಿತ್ಯ ಆಧಾರ ಏನಿದೆ ?

ಶ್ರೀ ವೀರೇಂದ್ರ ಪಾಟೀಲ್.—ಆಡ್‌ಹಾಕ್ ಕಮಿಟಿ ಯವರು ಸಾಕಷ್ಟು ಪರಿಶೀಲನೆ ಮಾಡಿ ರಿಪೋರ್ಟು ಕೊಟ್ಟಿದ್ದಾರೆ. ಈ ರಿಪೋರ್ಟು ಪ್ರಕಾರ ಈಗ ನಮಗೆ ಸದ್ಯಕ್ಕೆ 18 ಮಿಲಿಯನ್ ಗ್ಯಾಲನ್ ನಷ್ಟೆನ್ನ ಇರುವುದನ್ನು 1963ರ ಅಂತ್ಯದೊಳಗಾಗಿ ಈ ಸ್ಕೀಂ ತೆಗೆದುಕೊಳ್ಳು ವುದರಿಂದ ಇನ್ನೂ 10 ಮಿಲಿಯನ್ ಗ್ಯಾಲನ್ ಜಾಸ್ತಿ ಯಾಗುತ್ತದೆ. ಅಂದರೆ ಅದು 28 ಆಗುತ್ತದೆ. ಹಳ್ಳಿಮಾಲಾ ಯೋಜನೆಯ ಮೊದಲನೆಯ ಹಂತ ಮುಗಿದ ಮೇಲೆ 55 ಮಿಲಿಯನ್ ಗ್ಯಾಲನ್ ನಷ್ಟೆನ್ನ ಆಗಬಹುದು ಈಗ ಬೆಂಗಳೂರು ನಗರದ ಬೆಳವಣಿಗೆ ಯಾಗುತ್ತಿರುವುದಕ್ಕೆ ಅಷ್ಟು ನೀರು ಹಳ್ಳಿಮಾಲಾ ಯೋಜನೆಯಿಂದ ಪೂರೈಸಲಾಗುವುದು ಎಂದು ಅಂದಾಜು ಮಾಡಲಾಗಿದೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.-ಹಳ್ಳಿಮಾಲಾ ಯೋಜನೆಗೆ ಎಷ್ಟು ಹಣ ಖರ್ಚಾಗುತ್ತದೆ? ಹತ್ತು ವರ್ಷ ನೀರು ಪೂರೈಕೆಯಾದ ಮೇಲೆ ಬೆಂಗಳೂರು ನಗರಕ್ಕೆ ನೀರು ಪೂರೈಸಲು ಏನು ಮಾಡಬೇಕಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ಮೊದಲನೇ ಸ್ಟೇಜ್ ಹತ್ತು ವರ್ಷ ಎಂದು ತೆಗೆದುಕೊಂಡರೆ, ಮೊದಲನೇ ಮತ್ತು ಎರಡನೇ ಸ್ಟೇಜಿಗೆ 20 ಕೋಟಿ 82 ಲಕ್ಷ ರೂಪಾಯಿ ಖರ್ಚಾಗುತ್ತದೆ. ಇದರಿಂದ 55 ಮಿಲಿಯನ್ ಗ್ಯಾಲನ್ ನೀರು ಹೆಚ್ಚು ಬರುತ್ತದೆ. ಮೊದಲನೇ ಹಂತದಲ್ಲಿ 18 ಮತ್ತು 10 ಅಂದರೆ 28 ಮಿಲಿಯನ್ ಗ್ಯಾಲನ್ ನೀರು ಪೂರೈಕೆಯಾಗುವುದು. ಹಳ್ಳಿ ಮಾಲಾ ಯೋಜನೆಯಿಂದ 55 ಮಿಲಿಯನ್ ಗ್ಯಾಲನ್ ನೀರು ದೊರೆಯುತ್ತದೆ. ಎರಡನೇ ಸ್ಟೇಜ ನಂತರ ಹಳ್ಳಿಮಾಲಾ-ಕಮ್-ಕಾವೇರಿ ಯೋಜನೆ ಬರುತ್ತದೆ. ಈ ಯೋಜನೆಯಿಂದ ದೊರೆಯುವ ನೀರು ಸಾಕಾಗಬಹುದು ಎಂದು ಅಂದಾಜು ಮಾಡಿದೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—30.77 ಲಕ್ಷ ರೂಪಾಯಿಗಳನ್ನು ನಷ್ಟಮಾಡಿಕೊಂಡು ಈ ಹಳ್ಳಿ ಮಾಲ ಯೋಜನೆಯಿಂದ ಬೆಂಗಳೂರಿಗೆ 10 ವರ್ಷ ಗಳಲ್ಲಿ ಸಾಕಷ್ಟು ನೀರನ್ನು ಒದಗಿಸುವ ಬದಲು ಅದಕ್ಕಿಂತಲೂ ಜಾಗ್ರತೆಯಾಗಿ ಯಶಸ್ವಿಯಾಗತಕ್ಕ ಕಾವೇರಿ ನದಿಯ ನೀರನ್ನು ಬೆಂಗಳೂರಿಗೆ ಏಕೆ ಒದಗಿಸಿ ಕೊಡಬಾರದು ?

ಶ್ರೀ ವೀರೇಂದ್ರ ಪಾಟೀಲ್.—ಜನರಲ್ಲಿ ಇತ್ತೀಚೆಗೆ ಒಂದು ತಪ್ಪು ಭಾವನೆ ಇರಬಹುದು ಎಂದು ನನಗನಿ ಸುತ್ತದೆ. ಈಗ ಈ ಮೂರು ಸ್ಕೀಮುಗಳ ಪೈಕಿ ಸೆಕೆಂಡ್ ಸ್ಟೇಜ್‌ನಲ್ಲಿಯೇ ಕಾವೇರಿ ಮುಟ್ಟುವಂತೆ ಆಗತ್ಯವಿಲ್ಲ. ಈಗ ಫಸ್ಟ್ ಸ್ಟೇಜ್ ಹಳ್ಳಿಮಾಲ, ಸೆಕೆಂಡ್‌ಸ್ಟೇಜ್ ಷಿಂಷಾ,ಮೂರನೆಯ ಸ್ಟೇಜ್ ಕಾವೇರಿ ಹೀಗೆ ಹೋಗಬೇಕು. ಈಗ ಈ ಮೂರು ಸ್ಕೀಮು ಗಳನ್ನು ಇನ್‌ವೆಸ್ಟಿಗೇಟ್ ಮಾಡುತ್ತಿದ್ದೇವೆ. ಈ ಬಗ್ಗೆ ಆಡ್‌ಹಾಕ್ ಕಮಿಟಿಯವರು ಸಾಕಾದಷ್ಟು ವಿಚಾರ ಮಾಡಿದ್ದಾರೆ. ಇದರಲ್ಲಿ ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಇದ್ದಾರೆ. ಕೇವಲ ಯಾರೂ ಆಫಿಷಿಯಲ್ ಕಮಿಟಿ ಯವರು ಇದರಲ್ಲಿ ಸೇರಿಕೊಂಡು ವಿರೋಧ ಅಭಿಪ್ರಾಯ ಕೊಟ್ಟು ಯಾವ ತೊಂದರೆಯನ್ನು ಮಾಡಿಲ್ಲ. ಆಡ್ ಹಾಕ್ ಕಮಿಟಿಯವರು ಈ ವಿಚಾರದಲ್ಲಿ ಒಂದು ನಿರ್ಧಾರಮಾಡಿ ಹೇಳಿದ್ದಾರೆ. ಈ ಮೂರು ಸ್ಕೀಮು ಗಳಲ್ಲಿ ನಮಗೆ ಉಪಯುಕ್ತವಾದುದು ಹಳ್ಳಿಮಾಲಾ ಯೋಜನೆ. ಸುಮಾರು ನಾಲ್ಕೈದು ವರ್ಷಗಳಲ್ಲಿ 25 ಮಿಲಿಯನ್ ಗ್ಯಾಲನ್ ಬರಬಹುದು. ಇದು ಕಾಲ ಕಾಲಕ್ಕೆ ಆದಷ್ಟು ಕಡಮೆ ಖರ್ಚುಗಳಲ್ಲಿಯೇ ಪೂರ್ಣ ಗೊಳ್ಳುವ ನಿರೀಕ್ಷೆ ಇದೆ. ಇತ್ತೀಚೆಗೆ ಅನೇಕ ಜನ ಕಾವೇರಿ ನದಿಯಿಂದ ನೀರನ್ನು ತರಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಆ ಬಗ್ಗೆ ಇನ್‌ವೆಸ್ಟಿ ಗೇಷನ್ ಮಾಡಿ ನೋಡೋಣ.

ಶ್ರೀ ಟಿ. ಮಾದಯ್ಯಗೌಡ.—ಈ ಹಳ್ಳಿಮಾಲಾ ಯೋಜನೆಗೆ ಎಷ್ಟು ಹಣ ಖರ್ಚಾಗುತ್ತದೆ ಮತ್ತು ಕಾವೇರಿ ನದಿ ಯೋಜನೆಗೆ ಎಷ್ಟು ಹಣ ಖರ್ಚಾಗು ತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ಹಳ್ಳಿಮಾಲಾ cum ಕಾವೇರಿ ಸೆಕೆಂಡ್ ಸ್ಟೇಜ್ 20 ಕೋಟಿ 80 ಲಕ್ಷ ರೂಪಾಯಿಗಳು ಖರ್ಚಾಗುತ್ತವೆ. ಆದರೆ ಕಾವೇರಿ ನದಿ ಯೋಜನೆಗೆ 22 ಅಥವಾ 23 ಕೋಟಿ ರೂಪಾಯಿ ಗಳು ಖರ್ಚಾಗುತ್ತವೆ.

ಶ್ರೀ ಆರ್. ದಯಾನಂದಸಾಗರ್.—ಬೆಂಗಳೂರಿನ ಕಾರ್ಪೊರೇಷನ್ನಿನವರು ಬೆಂಗಳೂರು ನಗರಕ್ಕೆ ನೀರಿ ಗೋಸ್ಕರವಾಗಿ ಬೆಂಗಳೂರಿನಲ್ಲಿ ಜಲಕ್ಷಾಮವುಂಟಾ ಗಿದೆಯೆಂದು ಮತ್ತು ಅದರಿಂದಾಗಿ ಬೆಂಗಳೂರಿನ ನಾಗರಿಕರಿಗೆ ಬಹಳ ತಾಪತ್ರಯವಾಗಿದೆಯೆಂದೂ ಬಹಳ ಕಾಲದಿಂದಲೂ ಸರ್ಕಾರಕ್ಕೆ ಮೊರೆ ಇಡುತ್ತಿ ದ್ದಾರೆ. ಈಗ ಸರ್ಕಾರದವರು ಮೂರು ಯೋಜನೆಗಳು ತಮ್ಮ ಮುಂದಿವೆಯೆಂದು ಹೇಳುತ್ತಿದ್ದಾರೆ. ಅವು ಹಳ್ಳಿ ಮಾಲಾ, ಷಿಂಷಾ ಮತ್ತು ಕಾವೇರಿ ಯೋಜನೆಗಳು ಹೀಗಿರುವುದರಿಂದ ಯಾವ ಸ್ಕೀಮನ್ನು ಮೊದಲು ಮಾಡುತ್ತೀರಿ ಮತ್ತು ಯಾವಾಗ ಅದನ್ನ ಕೈಗೊಳ್ಳು ತ್ತೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ವೀರೇಂದ್ರಪಾಟೀಲ್.—ಯಾವ ಸ್ಕೀಮು ಯಾವಾಗ ಆಗುತ್ತದೆ, ಯಾವುದಾದನಂತರ ಯಾವ

ಸ್ಕೀಮನ್ನು ತೆಗೆದುಕೊಳ್ಳಬೇಕೆಂಬುದು ವಿಚಾರ ಮಾಡಬೇಕಾಗಿದೆ. ಆದರೆ ಈ ಮೂರು ಸ್ಕೀಮುಗಳನ್ನೂ ಒಮ್ಮೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈಗ ಎಲ್ಲವನ್ನೂ ಇನ್ವೆಸ್ಟಿಗೇಷನ್ ಮಾಡುತ್ತಿದ್ದೇವೆ. ಈಗ ಯಾವ ಸ್ಕೀಮು ಉತ್ತಮವಾಗಿದೆಯೋ ಮತ್ತು ಅನುಕೂಲವಾಗಿದೆಯೋ ಅದನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ವೈ. ರಾಮಚಂದ್ರ.—ಈಗ ಈ ಹಳ್ಳಿಮಾಲಾ ಯೋಜನೆಯನ್ನು ಕೈಗೊಂಡರೆ 7,500 ಜನರನ್ನು ಸ್ಥಳಾಂತರಿಸಲಾಗುವುದು ಮತ್ತು ಸುಮಾರು 2,745 ಎಕರೆ ಜಮೀನು ಮುಳುಗಡೆಯಾಗುವುದು ಎಂದು ಹೇಳಿದ್ದೀರಿ. ಆದರೆ ಕಾವೇರಿ ನದಿಯಿಂದ ನೇರವಾಗಿ ಬೆಂಗಳೂರಿಗೆ ನೀರನ್ನು ತರುವುದರಲ್ಲಿ ಯಾವ ತೊಂದರೆಯೂ ಆಗುವುದಿಲ್ಲ. ಈಗಾಗಲೇ ಅರ್ಕಾವತಿ ನದಿಯಿಂದ ಹೆಸರುಘಟ್ಟ ಮತ್ತು ತಿಪ್ಪಗೊಂಡನ ಹಳ್ಳಿಗಳ ಮೂಲಕ ಬೆಂಗಳೂರಿಗೆ ನೀರನ್ನು ತರುತ್ತಿರುವಾಗ ಪುನಃ ಅರ್ಕಾವತಿಗೆ ಈಗ ಮೂರನೇ ಅಣೆಯನ್ನು ಹಾಕುವುದಕ್ಕೆ ಬದಲು ಈಗ ಕಾವೇರಿಯಿಂದಲೇ ನೇರವಾಗಿ ನೀರನ್ನು ತರುವುದಕ್ಕೆ ಸಾಧ್ಯವಿಲ್ಲವೆ ? ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ವೀರೇಂದ್ರಪಾಟೀಲ್.—ಈಗ ಕಾವೇರಿ ಯೋಜನೆಯನ್ನು ತೆಗೆದುಕೊಂಡರೆ 22-23 ಕೋಟಿ ರೂಪಾಯಿಗಳು ಖರ್ಚಾಗುತ್ತವೆ. ಅದು ಕಷ್ಟ; ಸ್ವಲ್ಪ ದೂರವಾಗಬಹುದು. ಈಗಿರತಕ್ಕ ಪ್ರಶ್ನೆ ಹಳ್ಳಿಮಾಲಾ ಯೋಜನೆ. ಅದನ್ನು ಬಿಟ್ಟು ಕಾವೇರಿಯನ್ನು ತೆಗೆದುಕೊಂಡರೆ ಸುಮಾರು 20 ಮೈಲಿಗಳಷ್ಟು ಪೈಪುಲೈನುಗಳು ಹೋಗಬೇಕಾಗುತ್ತದೆ. ಹಳ್ಳಿಮಾಲಾ cum ಕಾವೇರಿ ಯೋಜನೆಗೆ ಅಷ್ಟು ಬೇಕಾಗುವುದಿಲ್ಲ. ಸುಮಾರು 20 ಕೋಟಿ 80 ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗುತ್ತವೆ. ಕಾವೇರಿ ಯೋಜನೆಗೆ 22-23 ಕೋಟಿ ರೂಪಾಯಿಗಳು ಹಿಡಿಯುತ್ತವೆ. ಈಗ ಕಾವೇರಿ ಯೋಜನೆಯನ್ನು ತೆಗೆದುಕೊಂಡರೆ ಕೇವಲ 8-10 ವರ್ಷಗಳಲ್ಲಿ ಇದು ಸಾಧ್ಯವಾಗುವುದಿಲ್ಲ. ಅದು ಬಹುದೊಡ್ಡ ಸ್ಕೀಂ. ಇದೇ ತಾಪತ್ರಯ. ಇದರ ಬಗ್ಗೆ ಆಗಲೇ ಅನೇಕರು ತಯಾರು ಇದ್ದಾರೆ ಎಂಬ ಪ್ರಶ್ನೆಯೂ ಇದೆ. ಆದರೆ ಫಸ್ಟ್ ಸ್ಟೇಜಿನಲ್ಲಿ ಹಳ್ಳಿಮಾಲಾ ಯೋಜನೆಯನ್ನು ತೆಗೆದುಕೊಂಡು ಇನ್ನು ನಾಲ್ಕೈದು ವರ್ಷಗಳಲ್ಲಿಯೇ ಅದನ್ನು ಮುಗಿಸಿ ಆ ಮೇಲೆ ಇತರ ಯೋಜನೆಗಳನ್ನು ನೋಡಬೇಕಾಗಿದೆ. ಏಕೆಂದರೆ ಇದರಿಂದ ಖರ್ಚು ಕಡಮೆಯಾಗುತ್ತದೆ; ರೆಕರಿಂಗ್ ಎಕ್ಸ್‌ಪೆಂಡಿಚರ್ ಸಹ ಕಡಮೆಯಾಗುತ್ತದೆ. ಈಗ ಕಾವೇರಿ ಯೋಜನೆಯನ್ನು ತೆಗೆದುಕೊಂಡರೆ ನಾಲ್ಕೈದು ಪಂಪ್‌ಸ್ಟೇಷನುಗಳಾದರೂ ಹಾಕಬೇಕಾಗುತ್ತದೆ. ಆದರೆ ಹಳ್ಳಿಮಾಲಾ ಯೋಜನೆಗೆ ಕೇವಲ ಎರಡು-ಮೂರು ಪಂಪಿಂಗ್ ಸ್ಟೇಷನ್‌ಗಳೇ ಸಾಕು. ಇದರಿಂದ ಖರ್ಚಿನಲ್ಲಿ ಎಷ್ಟೋ ವ್ಯತ್ಯಾಸ ಬರುತ್ತದೆ. ಆದ್ದರಿಂದ ಈ ಹಳ್ಳಿಮಾಲಾ ಯೋಜನೆಗೆ ಸರ್ಕಾರಕ್ಕೆ ಕಡಮೆ ಖರ್ಚಾಗಬಹುದೆಂದು ಸರ್ಕಾರದವರು ಈಗ ಈ ಯೋಜನೆಯನ್ನು ಕೈಗೊಂಡಿದ್ದಾರೆ.

ಶ್ರೀ ವೈ. ರಾಮಚಂದ್ರ.—ಕಾವೇರಿ ನದಿಯಿಂದ ನೀರನ್ನು ಬೆಂಗಳೂರಿಗೆ ತರಬೇಕಾದರೆ 8–10 ವರ್ಷಗಳಾದರೂ ಬೇಕಾಗುತ್ತವೆ ಮಾನ್ಯ ಮಂತ್ರಿಗಳು ಎಂದು ಹೇಳಿದರು. ನಾನು ಹೇಳುವುದಿಷ್ಟೆ: ಈಗ ಸರ್ಕಾರದವರು ಒಂದು ವಾಟರ್ ಬೋರ್ಡನ್ನು ರಚನೆ ಮಾಡಿದ್ದೀರಿ ಆದರೆ ಕೇವಲ ಮೂರು ವರ್ಷಗಳಲ್ಲಿಯೇ ಕಾವೇರಿ ನದಿಯಿಂದ ನೀರನ್ನು ತಂದುಕೊಡುತ್ತೀವೆ.

Mr. SPEAKER.—It is not a question. It is a suggestion, you are making.

Sri Y. RAMACHANDRA.—Even granting that it is a suggestion, we are going to bring Cauvery Water to Bangalore within three years ; what is the reply of the Government, Sir ?

Sri VEERENDRA PATIL.—The Hon'ble Member is throwing out the suggestion in the spirit of a challenge, Sir.

Mr. SPEAKER.—The Hon'ble Minister will remember that this is not the place where challenges can be made. It will be ruled out.

Sri VEERENDRA PATIL.—He is saying that if a water board is constituted and work entrusted to it, he will bring the Cauvery water to Bangalore within three years. ಈಗ ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಒಪಿನಿಯನ್ ನಮ್ಮ ಮುಂದಿದೆ. ಅದನ್ನು ನಾನು ಹೇಳುತ್ತಿದ್ದೇನೆ. ಅವರು ಹೇಳಿದ್ದನ್ನು ಸಹ ಪರಿಶೀಲನೆ ಮಾಡುತ್ತೇವೆ. ಕಾವೇರಿಯಿಂದ ಬೆಂಗಳೂರಿಗೆ ನೀರನ್ನು ಕೇವಲ 3 ವರ್ಷಗಳಲ್ಲಿಯೇ ಯಾವ ರೀತಿ ತರುವುದಕ್ಕೆ ಸಾಧ್ಯವೆಂಬುದನ್ನು ಮಾನ್ಯ ಸದಸ್ಯರು ಚೆನ್ನಾಗಿ ತಿಳಿದಿದ್ದರೆ, ಅದರ ಬಗ್ಗೆ ಏನಾದರೂ ಸಲಹೆಗಳನ್ನು ಕೊಟ್ಟರೆ ನಾನು ಅವನ್ನು ವಿಚಾರ ಮಾಡುತ್ತೇನೆ.

Sri R. DAYANANDA SAGAR.—"When Rome was burning Nero was fiddling" ಎನ್ನುವ ಹಾಗೆ ಬೆಂಗಳೂರಿನಲ್ಲಿ ನೀರಿನ ಹಾಹಾಕಾರ ಪರಿಸ್ಥಿತಿ ಇರುವಾಗ ಸರ್ಕಾರದವರು ಈ ಯೋಜನೆಗಳನ್ನು ಇನ್ನೂ ಇನ್ವೆಸ್ಟಿಗೇಷನ್ ಮಾಡುತ್ತಿದ್ದೀರಿ ಮತ್ತು ಬೆಂಗಳೂರಿಗೆ ಸಾಕಷ್ಟು ನೀರು ಪೂರೈಸಲ್ಪಡುವುದಕ್ಕೆ ಸುಮಾರು ಹತ್ತು ವರ್ಷಗಳಾಗುತ್ತವೆ ಎಂದು ಹೇಳುವುದು ರಿಯೇ ?

ಶ್ರೀ ವೀರೇಂದ್ರ ಪಾಟೀಲ್.—ಅಂತಹ ಪರಿಸ್ಥಿತಿಯನ್ನು ಕಂಡುಕೊಂಡೇ ಈಗಾಗಲೇ ವಾಟರ್ ಸಪ್ಲೈ ಪ್ರೊಸಿಷ್ಟ್ ಯಾವ ರೀತಿ ಇಂಪ್ರೂವ್ ಮಾಡಬೇಕೆಂಬುದನ್ನು ಪರಿಶೀಲಿಸಿ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. 1963ನೇ ಇಸವಿಯ ಅಂತ್ಯದೊಳಗೆ ಇನ್ನು 10 ಮಿಲಿಯನ್ ಗ್ಯಾಲನ್ ನೀರು ಪಡೆಯಲು ಟ್ರಿಪ್ಲಿಕೇಟ್ ಲೈನ್ ಹಾಕಲಿಕ್ಕೆ ಈಗಾಗಲೇ ಸುಮಾರು 2 ಕೋಟಿ 55 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ. ಅಂದಮೇಲೆ 1963ನೇ ಅಂತ್ಯದೊಳಗೆ 10 ಮಿಲಿಯರ್ಡ್ ಗ್ಯಾಲರ್ಡ್ ನೀರು ಹೆಚ್ಚು ಬರುತ್ತದೆ. ಇದು ಪೂರ್ತಿಯಾಗುವುದರೊಳಗೆ ಮುಂದೆ ಮತ್ತೆ ಯಾವ ಸ್ಕೀಮನ್ನು ತೆಗೆದುಕೊಳ್ಳಬಹುದೆಂಬುದನ್ನು ವಿಚಾರ ಮಾಡುತ್ತೇವೆ.

Mr. SPEAKER.—Sri Shivappa.

Sri R. DAYANANDA SAGAR.—I have not yet finished, Sir.

Mr. SPEAKER.—There is nothing like your finishing. It is my permitting you to put a supplementary.

Sri R. DAYANANDA SAGAR.—Kindly permit me, Sir.

Mr. SPEAKER.—I have called upon Sri Shivappa.

ಶ್ರೀ ಎಸ್. ಶಿವಪ್ಪ.—ಬೆಂಗಳೂರಿನ ಜಲ ಕ್ಷಾಮವನ್ನು ನಿವಾರಿಸಲು ಸರ್ಕಾರದಲ್ಲಿ ಅಸಮರ್ಥತೆ ಇರುವ ಕಾರಣ ಈ ಬೆಂಗಳೂರಿನ ಜನಗಳ ಒತ್ತಡವನ್ನು ಕಡಮೆ ಮಾಡುವುದಕ್ಕಾಗಿ ಬೆಂಗಳೂರಿನ ಜನರನ್ನು ಬೇರೆ ಕಡೆಗೆ ವರ್ಗಮಾಡುವುದಕ್ಕೇನಾದರೂ ಯೋಜನೆ ಮಾಡಿದ್ದೀರಾ?

Sri S. R. KANTHI (Chief Minister).—Sir, I would like to add a word here. I will make the position very clear. We are in a stage of investigation at present and I have also given the assurance to the Corporation that we do not want to brush aside the views of the Corporation. After all this is a scheme which has to be taken up by the Government of India and the Government of India will have to give the necessary amount. That being so, we will decide it later on, as soon as we get the investigation reports.

Mr. SPEAKER.—Then we can discuss it later.

Sri S. R. KANTHI.—In this connection, Sir, I wish to make it clear that the investigation will be over within a period of six months at the most.

Sri K. PUTTASWAMY.—When exactly was the Hallimala Scheme taken up for consideration?

Sri VEERENDRA PATIL.—Sir, an *ad hoc* Committee was constituted to examine and advise the Government on the proposal for a long range water-supply to Bangalore City in February 1968. They have already submitted a report with a unanimous recommendation. They had made a unanimous recommendation and we had taken a decision. Subsequently we have taken a decision to have all the three schemes investigated simultaneously.

2 P.M.

Sri K. PUTTASWAMY.—May I take it that the scarcity now prevailing in the city is directly attributable to the inordinate delay on the part of Government in taking a decision in this matter?

Sri VEERENDRA PATIL.—I do not accept the contention of the Hon'ble Member that three has been inordinate delay. As soon as we received a report, we took a decision.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೇಂದ್ರ ಸರ್ಕಾರದ ಹಣ ಖರ್ಚು ಮಾಡುತ್ತಾರೆ ಎಂದು ಮುಖ್ಯ ಮಂತ್ರಿಗಳು ಹೇಳಿದರು. ಈ ರಿಪೋರ್ಟ್ ತಮ್ಮ ಕೈಗೆ ಬಂದ ಮೇಲೆ ಇದನ್ನು ಕೇಂದ್ರ ಸರ್ಕಾರದವರ ಕೈಗೆ ಕೊಟ್ಟಿರಾ? ಕೊಟ್ಟಿದ್ದರೆ ಅವರ ಅಭಿಪ್ರಾಯವೇನು?

ಶ್ರೀ ವೀರೇಂದ್ರ ಪಾಟೀಲ್.—ಚೀಫ್ ಮಿನಿಸ್ಟರು ಹೇಳಿದ್ದು ತಾವು ಸರಿಯಾಗಿ ಕೇಳಲಿಲ್ಲ. ಈಗ ಈ ಮೂರು ಯೋಜನೆಗಳ ವಿವರಗಳನ್ನೆಲ್ಲಾ ಪರಿಶೀಲನೆ ಮಾಡಿದ ಮೇಲೆ ಅದರಲ್ಲಿ ಯಾವುದು ಫೀಸಿಬಲ್ ಇದೆ ಎನ್ನುವುದನ್ನು ವರದಿ ಬಂದ ಮೇಲೆ ಸರ್ಕಾರದ ನಿರ್ಣಯ ತೆಗೆದುಕೊಂಡು, ಕೇಂದ್ರ ಸರ್ಕಾರದವರನ್ನು ದುಡ್ಡಿನ ಸಲುವಾಗಿ ಕೇಳಬೇಕಾಗುತ್ತದೆ, ಅದಷ್ಟು ತೀವ್ರ 6 ತಿಂಗಳಿನಲ್ಲೇ complete ಮಾಡುತ್ತೇವೆ ಎಂದು ಹೇಳಿದರೆ ವಿನಾ ಆ ರಿಪೋರ್ಟ್ ಮೇಲೆ ಹೇಳಿದ್ದಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ತಿಳಿದುಕೊಂಡ ಮಟ್ಟಿಗೆ in my own humble capacity ಮುಖ್ಯ ಮಂತ್ರಿಗಳು ಈಗಾಗಲೇ 3-4 ಕಡೆ ಬಹಿರಂಗ ಸಭೆಗಳಲ್ಲೂ ಕೂಡ ಹೇಳಿದ್ದಾರೆ. ಕಾವೇರಿ ನೀರನ್ನು ತರುತ್ತೇವೆ ಎಂದು ಸ್ಪಷ್ಟಪಡಿಸಿದ್ದಾರೆ. ಅದಕ್ಕೆ ಈ ಆಡ್‌ಹಾಕ್ ಕಮಿಟಿಯವರ ವರದಿಯನ್ನು ಕೇಂದ್ರ ಸರ್ಕಾರದವರ ಕೈಗೆ ಕೊಟ್ಟಿರಾ, ಕೊಟ್ಟಿದ್ದರೆ ಅವರು ಏನು ಅಭಿಪ್ರಾಯವನ್ನು ಕೊಟ್ಟರು ನಮಗೆ ಹಣ ಒದಗಿಸುವುದಕ್ಕೆ ಎಂದು ನಾನು ಕೇಳಿದೆ.

ಶ್ರೀ ಎಸ್. ಆರ್. ಕಂಠಿ.—ನಾನು ಹೇಳಿದುದನ್ನು ವಿನ್ಯತಪಾಗಿ ಅರ್ಥ ಮಾಡಿಕೊಂಡಿದ್ದಾರೆ, ಶ್ರೀಮಾನ್ ಮುಕ್ಕಣ್ಣಪ್ಪನವರು. ನಾನು ಹೇಳಿದ್ದು ಮೂರು ಸ್ಕೀಂಗಳನ್ನು ಇನ್‌ವೆಸ್ಟಿಗೇಟ್ ಮಾಡಿಸಿ ಆ ಮೇಲೆ ಕಾರ್ಪೊರೇಷನ್ ಅವರ ಜೊತೆಯಲ್ಲಿ ಮಾತನಾಡಿಕೊಂಡು ಕೇಂದ್ರ ಸರ್ಕಾರಕ್ಕೂ ಪ್ಲಾನಿಂಗ್ ಕಮಿಷನ್‌ಗೂ ತೆಗೆದುಕೊಂಡು ಹೋಗಿ ಅಲ್ಲಿ ಯಾವುದು ಸಾಧ್ಯವೋ ಅದನ್ನು ಮಾಡಿಸಲು ವಿಚಾರ ಮಾಡಿದ್ದೇವೆ ಎಂದು. ಕಾವೇರಿ ಸ್ಕೀಂ ಮಾಡಬಾರದು ಎಂದು ಯೋಚನೆ ಇಲ್ಲ; ಬೆಂಗಳೂರು ನಗರದ ಜನರ ಅಭಿಪ್ರಾಯದ ವಿರುದ್ಧ ನಡೆಯುವುದಕ್ಕೆ ಸರ್ಕಾರದವರಿಗೆ ಇಚ್ಛೆಯಿಲ್ಲ ಎಂದು ಹೇಳಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ತಾತ್ಕಾಲಿಕವಾಗಿ ತಿಪ್ಪಗೊಂಡನ ಹಳ್ಳಿಯಿಂದ 3ನೇ ಪೈಪ್‌ಲೈನ್ ಹಾಕುವುದಕ್ಕೆ ಕಾರ್ಯಕ್ರಮ ಪುರು ಮಾಡಿದ್ದೇವೆ ಎಂದು ಹೇಳಿದಿರಿ. ಯಾವಾಗ ಮಾಡಿದಿರಿ? ಅದನ್ನು ಅದಷ್ಟು ಜಾಗ್ರತೆ ಮಾಡಿಸಿದರೆ ನದ್ಯಕ್ಕೆ ನೀರಿನ ಅಭಾವ ಕಡಮೆಯಾಗುವುದಿಲ್ಲವೇ? ಎಷ್ಟು ದಿನ ತೆಗೆದುಕೊಳ್ಳುತ್ತದೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವೇ?

ಶ್ರೀ ವೀರೇಂದ್ರ ಪಾಟೀಲ್.—ಕೆಲಸ ಪ್ರಾರಂಭ ಮಾಡಿದ್ದೇವೆ. ಕೆಲಸ ವೇಗದಿಂದ ನಡೆಯುತ್ತ ಇದೆ. ಡಿಸೆಂಬರ್ 1963ರ ಒಳಗೆ ಇನ್ನು 10 ಮಿಲಿಯನ್ ಹೆಚ್ಚು ನೀರು ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿದ್ದೇನೆ.

ಶ್ರೀ ಆರ್. ದಯಾನಂದ ಸಾಗರ್.—ಹಳ್ಳಿಮಾಲ ಯೋಜನೆ ಪೂರ್ತಿಯಾಗುವುದಕ್ಕೆ 5 ವರ್ಷ ಆಗುತ್ತದೆ, ಕಾವೇರಿ ಯೋಜನೆಗೆ 10 ವರ್ಷ ಆಗುತ್ತದೆ. ಬೆಂಗಳೂರಿನಲ್ಲಿ ಈಗಾಗಲೇ ನೀರಿಗೆ ಬಹಳ ತೊಂದರೆ ಆಗಿರುವುದರಿಂದ ಬಾವಿಗಳನ್ನಾದರೂ ತೆಗೆಸಿ ನೀರು ಒದಗಿಸುವುದಕ್ಕೆ ಸರ್ಕಾರದವರಾಗಲೀ ಕಾರ್ಪೊರೇಷನವರಾಗಲೀ ಏರ್ಪಾಡು ಮಾಡಿದ್ದೀರಾ?

ಶ್ರೀ ವೀರೇಂದ್ರ ಪಾಟೀಲ್.—ಕಾರ್ಪೊರೇಷನವರು ಈಗ ಏನು ಮಾಡಿದ್ದಾರೋ ಗೊತ್ತಿಲ್ಲ.

ಸದ್ಯಕ್ಕೆ ನಾವು ನಮ್ಮ ಅಗ್ರಿಮೆಂಟ್ ಪ್ರಕಾರ ಕಾವೇರಿ ನೀರು ಮಾರುತ್ತೇವೆ. ಕಾವೇರಿ ನವರು ಬೋರ್‌ವೆಲ್ಸ್ ಹಾಕಿ ನೀರು ಸಪ್ಲೈ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಅವರೇ ವಿಚಾರ ಮಾಡಬಹುದು.

Sri B. NANJAPPA.—When was this thing started during the Third Five-Year Plan?

Sri VEERENDRA PATIL.—This was sanctioned in March 1960.

ಶ್ರೀ ಬಿ. ನಂಜಪ್ಪ.—ತಮ್ಮ ಗಮನಕ್ಕೆ ಬಂದ ಮೇಲೆ ಇದುವರೆಗೂ ಪಂಪ್ ಸೆಟ್‌ಗೆ ಏಕೆ ಆರ್ಡರ್ ಮಾಡಲಿಲ್ಲ?

ಶ್ರೀ ವೀರೇಂದ್ರ ಪಾಟೀಲ್.—ವಿವರಗಳು ನನ್ನ ಹತ್ತಿರ ಇಲ್ಲ.

ಶ್ರೀ ಜಿ. ವಿ. ಗೌಡ.—ಹಳ್ಳಿ ಮಾಲದಿಂದ ಆದರೆ 20 ಮೈಲಿ ಪೈಪ್‌ಲೈನ್ ಹಾಕಬೇಕು, ಕಾವೇರಿಯಿಂದ ತರುವುದಾದರೆ 55 ಮೈಲಿ ಹಾಕಬೇಕಾಗುತ್ತದೆ; ಇದು ಕಷ್ಟ ಎಂದು ಹೇಳಿದರು. ಮದರಾಸ್ ಸರ್ಕಾರದವರು ಮದರಾಸು ನಗರಕ್ಕೆ ಸುಮಾರು 160 ಮೈಲಿ ದೂರದಿಂದ ಕಾವೇರಿ ನೀರನ್ನು ತೆಗೆದುಕೊಂಡು ಹೋಗಬೇಕೆಂದಿರುವುದು ಗೊತ್ತೇ?

ಶ್ರೀ ವೀರೇಂದ್ರ ಪಾಟೀಲ್.—ಅದು ಏನೇ ಇರಲಿ. ಕಾವೇರಿಯಿಂದ ಇಲ್ಲಿಗೆ ನೀರು ತರಬಾರದು ಎಂದು ಇಲ್ಲ. ಹಳ್ಳಿ ಮಾಲ ಸೆಕೆಂಡ್ ಸ್ಟೇಜ್‌ನಲ್ಲಿ ಅಲ್ಲಿಂದಲೇ ಹಾಕಬೇಕಾಗುತ್ತದೆ. ಈಗ ಆದಷ್ಟು ತೀವ್ರ ಹೆಚ್ಚು ನೀರು ಕೊಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆನ್ನುವುದು ಇದೆ. ಇದರ ನಲುವಾಗಿ ಕಾವೇರಿ ನದಿಯ ನೀರು ತರಬೇಕಾದರೆ 8–10 ವರ್ಷ ಆಗಬಹುದು. ಹಳ್ಳಿ ಮಾಲದಿಂದ ಪ್ರಾರಂಭ ಮಾಡಿ ಇನ್ನೊಂದು 3-4 ವರ್ಷದಲ್ಲಿ ಸೆಕೆಂಡ್ ಸ್ಟೇಜ್ ಪೂರ್ತಿ ಮಾಡಿದರೆ ಅಷ್ಟರೊಳಗೆ 55 ಮಿಲಿಯನ್ ಗ್ಯಾಲನ್ ನೀರು ಬರುತ್ತದೆ ಎಂದು ಹೇಳಬಲ್ಲೆ.

ಶ್ರೀ ಎ. ಕೃಷ್ಣಶೆಟ್ಟಿ.—ಕಾವೇರಿ ನೀರನ್ನು ಉಪಯೋಗಿಸುವ ವಿಚಾರದಲ್ಲಿ ಮೈಸೂರು ಸರ್ಕಾರಕ್ಕೂ ಮದರಾಸು ಸರ್ಕಾರಕ್ಕೂ ಒಪ್ಪಂದವಾಗಿದೆಯಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ಅದು ನೀರಾವರಿ ಉಪಯೋಗದ ನಲುವಾಗಿ ಮಾತ್ರ. ಮೈಸೂರು ಮತ್ತು ಮದರಾಸ್ ಸರ್ಕಾರಗಳ ಒಪ್ಪಂದದ ಪ್ರಕಾರ ಬಹುಶಃ ಕುಡಿಯುವ ನೀರಿನ ನಲುವಾಗಿ ಆದು ಅಡ್ಡಿ ಬರಲಿಕ್ಕಿಲ್ಲ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಈಗ ತಾನೆ ಮಾನ್ಯ ನಟಿವರು 1963ನೇ ಡಿಸೆಂಬರ್ ಒಳಗೆ ಮುಗಿಸುತ್ತೇವೆ ಎಂದು ಹೇಳಿದರು. ಊರೆಲ್ಲಾ ಕೊಳ್ಳೆ ಹೊಡೆದ ಮೇಲೆ ಊರ ಬಾಗಿಲು ಹಾಕಿದರು ಎನ್ನುವ ಹಾಗೆ ಈಗ ನೀರೇ ಇಲ್ಲದೆ 24 ಗಂಟೆಗಳ ಕಾಲ ಬೀದಿಗಳಲ್ಲಿ ನೀರಿಗಾಗಿ ಜನ ನಾಲುಕಟ್ಟಿಕೊಂಡು ನಿಂತಿರುವುದನ್ನು ನೋಡಿದ್ದೀರಾ? ನೋಡಿ ಜಾಗ್ರತೆ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಉತ್ತರ ಹೇಳಿದ್ದೇನೆ.

ಶ್ರೀ ಕೆ. ದೇವಯ್ಯ.—ಮಾನ್ಯ ಮಂತ್ರಿಗಳು ಕಾವೇರಿಯಿಂದ ನೀರು ತರಲು 60 ಮೈಲಿ ಆಗುತ್ತದೆ, ಬಹಳ ಕಷ್ಟ ಎಂದು ಹೇಳಿದರು. ಅಂತೂ ಅದಕ್ಕೆ ಪೈಪುಗಳು ಬೇಕೇ ಬೇಕು. ಅದನ್ನು ಕೊಂಡು ಕೊಳ್ಳುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬಹುದಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ಯಾವುದು ಮೊದಲು ತೆಗೆದುಕೊಳ್ಳುತ್ತೇವೆ ಎಷ್ಟು ಮೈಲಿ ಪೈಪುಲೈನ್ ಬೇಕಾಗುತ್ತದೆ ಎನ್ನುವುದು ನಿರ್ಧರವಾಗದೇ ಪೈಪ್‌ಗಳನ್ನು ಕೊಂಡು ಕೊಳ್ಳುವುದು ನೂಕ್ತವಲ್ಲ.

Mr. SPEAKER.—Question time is over.

QUESTIONS FOR ANSWERS ON THE DAY

(but not taken up)

Motor Accidents in the State

*Q.—44. Sri T. MADAIAH GOWDA (Ramanagaram).—

Will the Government be pleased to state.—

(*a*) the number of motor accidents that occurred every year for the last four years in the State;

(*b*) the number of deaths due to such accidents;

(*c*) the preventive measures adopted to avoid such accidents;

(*d*) the main reasons for such accidents?

A.—Sri R. M. PATIL (Minister for Home).—

(*a*) The number of accidents that occurred during the last four years is as follows:—

Year		*No. of accidents*
1957—58	...	2065
1958—59	...	2534
1959—60	...	2734
1960—61	...	2559
(*b*) *Year*		*No. of deaths*
1957—58	...	296
1958—59	...	356
1959—60	...	404
1960—61	...	472

(*c*) Measures as described hereunder have been taken for the prevention of road accidents in the State:—

(i) Speed traps are being laid with the aid of stop watches and by chasing vehicles.

(ii) Appropriate traffic sign boards such as "Halt and Proceed" etc., are erected.

(iii) Traffic islands are constructed at appropriate road junctions.